**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ.**

ಸಿಸಿ ನಂ. 193/21

| | | |
|---|---|---|
| ಸಾಕ್ಷಿಯ ಹೆಸರು | ರವೀಂದ್ರನಾಥ | ಪಿ.ಡಬ್ಲ್ಯು-1 |
| ತಂದೆಯ ಹೆಸರು | ದ್ಯಾವಯ್ಯ | ಸಿ.ಡಬ್ಲ್ಯು-1 |
| ವಯಸ್ಸು | 33 **ವರ್ಷ** | |
| ಉದ್ಯೋಗ | ಸೆಕ್ಯೂರಿಟಿ ಗಾರ್ಡ್ | ದಿನಾಂಕಃ 16-09-2022. |
| ವಾಸ | ಸುಳುಗೋಡು . | ಪ್ರಮಾಣ ವಚನ ಬೋಧಿಸಲಾಯಿತು. |

<u>ಮುಖ್ಯ ವಿಚಾರಣೆಃ ಎಪಿಪಿ ರವರಿಂದ</u>

ಚಾಸಾ-2 ನನ್ನ ತಾಯಿ. ಚಾಸಾ-4 ನನ್ನ ತಂದೆ , ಚಾಸಾ-3 ನನ್ನ ನಾದಿನಿ , ಚಾಸಾ-5 ರಿಂದ 7 ರವರು ಪರಿಸಿತರು. 1 ನೇ ಆರೋಪಿ ನಮ್ಮ ಊರಿನವರು. 2 ನೇ ಆರೋಪಿ ನನ್ನ ಹೆಂಡತಿ . ನಾನು ಸೆಕ್ಯೂರಿಟಿ ಗಾರ್ಡ್ ಕೆಲಸವನ್ನು ಕಟ್ಟಾಯದಲ್ಲಿ ಮಾಡುತ್ತಿದ್ದು , ಕೆಲಸ ಮುಗಿಸಿಕೊಂಡು ಮನೆಗೆ ದಿಃ15-11-2020 ರಂದು ರಾತ್ರಿ 12-00 ಗಂಟೆಗೆ ನಮ್ಮ ಮನೆಗೆ ಬಂದಾಗ ಮನೆಯಲ್ಲಿ 1 ನೇ ಆರೋಪಿಯು ಅಕ್ರಮವಾಗಿ ನಮ್ಮ ಮನೆಗೆ ಬಂದು ನನ್ನ ಹೆಂಡತಿ 2 ನೇ ಆರೋಪಿಯ ಜೊತೆ ಇದ್ದರು. ನಾನು ಅವರಿಬ್ಬರನ್ನು ನೋಡಿ ಏಕೆ ಈ ರೀತಿಯ ಅಕ್ರಮ ಕೆಲಸಗಳನ್ನು ಮಾಡುತ್ತಿದ್ದೀರಾ ಎಂದು ಕೇಳಿದ್ದಕ್ಕೆ ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನನ್ನು ಕೈಕಾಲು ಕಟ್ಟಿ ಹೊಳೆಗೆ ಎಸೆಯುತ್ತೇವೆಂದು ಹಗ್ಗವನ್ನು ಹುಡುಕಾಡುತ್ತಿದ್ದರು. ಆಗ ನಾನು ಕಿರುಚಿಕೊಂಡಾಗ ನನ್ನ ತಂದೆ ತಾಯಿ ಮನೆಗೆ ಬಂದರು , ನನ್ನ ತಂದೆ ತಾಯಿಯನ್ನು ನೋಡಿ ಇಬ್ಬರೂ ಹೆದರಿ ಓಡಿಹೋಗಿರುತ್ತಾರೆ. ನಂತರ ಮತ್ತೆ ಇಬ್ಬರೂ ಊರಿಗೆ ಬಂದು ಅದೇ ರೀತಿ ಮುಂದುವರಿದಿದ್ದು , ನಾನು ನಂತರ ಆರೋಪಿಗಳ ಮೇಲೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ದೂರನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು ನಾನು ದಿಃ23-11-2020 ರಂದು ನೀಡಿರುತ್ತೇನೆ. ನಂತರ ದಿಃ24-11-2020 ರಂದು ಪೋಲೀಸರು

ಮಹಜರ್ ಮಾಡಲು ನಮ್ಮ ಮನೆಗೆ ಬಂದಿದ್ದರು. ಪೋಲೀಸರು ನನ್ನ ಮತ್ತು ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಸಾಕ್ಷಿಯು ಕೃತ್ಯಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದಾಖಲೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಪೋಟೋಗಳನ್ನು ತೋರಿಸಿದ್ದು ಪೋಟೋದಲ್ಲಿ ತನ್ನನ್ನು ತಾನು ನೋಡಿ ಗುರುತಿಸಿದ್ದು , ಸದರಿ ಪೋಟೋಗಳನ್ನು ಕೃತ್ಯಸ್ಥಳದಲ್ಲಿ ತೆಗೆಸಿರುವುದಾಗಿ ತಿಳಿಸಿದ್ದು , ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿ-3 ಎಂದು , ಸಿ ಡಿ ಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ.

ಆರೋಪಿಯ ಪರ ವಕೀಲರು ಗೈರುಹಾಜರಿದ್ದು , ಪಾಟೀಸವಾಲಿಗಾಗಿ ಮುಂದೂಡಲು ಸಕಾರಣವಿಲ್ಲದ ಕಾರಣ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.,
ಆಲೂರು.